೧	೨	೩	೪
೪೦೩	೧೯೭೯	ಶ್ರೀ ಯಶವಂತ ಚಿತ್ತಾಲ	ಶಿಕಾರಿ (ಸೃಜನಶೀಲ ಸಾಹಿತ್ಯ)
೪೦೪	,,	ಶ್ರೀ ಎಂ ವಿ. ಸೀತಾರಾಮಯ್ಯ	ಪ್ರಾಚೀನ ಕನ್ನಡ ವ್ಯಾಕರಣಗಳು (ಸೃಜನೇತರ ಸಾಹಿತ್ಯ)
೪೦೫	೧೯೮೦	ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ	ಕಾರ್ವಾಲೋ (ಸೃಜನಶೀಲ ಸಾಹಿತ್ಯ)
೪೦೬	,,	ಪ್ರೊ. ಎಸ್.ಕೆ. ರಾಮಚಂದ್ರ ರಾವ	ತಿರುಪತಿ ತಿಮ್ಮಪ್ಪ (ಸೃಜನೇತರ ಸಾಹಿತ್ಯ)
೪೦೭	೧೯೮೧	ಶ್ರೀ ಚದುರಂಗ	ವೈಶಾಖ (ಸೃಜನಶೀಲ)
೪೦೮	,,	ಡಾ. ಎನ್.ಎಸ್. ವೀರಪ್ಪ	ಶಿಕ್ಷಣದ ಪಾರಿಭಾಷಿಕ ನಿಘಂಟು (ಸೃಜನೇತರ)
೪೦೯	೧೯೮೨	ಡಾ. ವಿ.ಕೃ. ಗೋಕಾಕ್	ಭಾರತ ಸಿಂಧುರಶ್ಮಿ (ಸೃಜನಶೀಲ)
೪೧೦	,,	ಶ್ರೀ ತ.ರಾ.ಸು	ದುರ್ಗಾಸ್ತಮಾನ (ಸೃಜನಶೀಲ)
೪೧೧	,,	ಪ್ರೊ. ವಿ.ಎಂ. ಇನಾಂದಾರ್	ಪಾಶ್ಚಾತ್ಯ ಕಾವ್ಯ ಮೀಮಾಂಸೆ
೪೧೨	೧೯೮೩	ಪ್ರೊ. ಸಂ.ಶಿ. ಭೂಸನೂರಮಠ	ಭವ್ಯಮಾನವ (ಸೃಜನಶೀಲ)
೪೧೩	,,	ಡಾ. ಜಿ.ಎಸ್. ಶಿವರುದ್ರಪ್ಪ	ಕಾವ್ಯಾರ್ಥ ಚಿಂತನ (ಸೃಜನೇತರ)
೪೧೪	೧೯೮೪	ಶ್ರೀ ರಾಘವೇಂದ್ರ ಖಾಸನೀಸ	ಖಾಸನೀಸರ ಕಥೆಗಳು (ಸೃಜನಶೀಲ)
೪೧೫	,,	ಶ್ರೀ ಹೆಚ್. ದೇವಿರಪ್ಪ	ಸಂಶೋಧನ ಸಂಪುಟ (ಸೃಜನೇತರ)

ವಿಷಯ : ರವೀಂದ್ರ ಕಲಾಕ್ಷೇತ್ರದಲ್ಲಿ ರಾತ್ರಿ ವೇಳೆಯಲ್ಲಿ ಯಕ್ಷಗಾನ ಪ್ರದರ್ಶನಕ್ಕೆ ಅನುಮತಿ

ಜುಳ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೪೪ (೧೦೯೦)

ಶ್ರೀ ಬಸವರಾಜ (ಬ್ರಹ್ಮಾವರ) :– ಮಾನ್ಯ ಯುವಜನ ಸೇವೆ ಕ್ರೀಡೆ ಕನ್ನಡ ಹಾಗೂ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರವೀಂದ್ರ ಕಲಾಕ್ಷೇತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಕಲೆಯಾದ ಯಕ್ಷಗಾನ ಪ್ರದರ್ಶನ ರಾತ್ರಿ ವೇಳೆಯಲ್ಲಿ ಏರ್ಪಡಿಸಲು ಅವಕಾಶ ನಿರಾಕರಿಸ ಲಾಗುತ್ತಿದೆಯೇ ?

ಆ) ಹಾಗಿದ್ದರೆ ಇದಕ್ಕೆ ಕಾರಣವೇನು ?

ಇ) ಸದರೀ ಪ್ರದರ್ಶನಕ್ಕೆ ಅನುವು ಮಾಡಿ ಕೊಡುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಶ್ರೀ ಎಸ್. ರಮೇಶ (ಯುವಜನ ಸೇವೆ ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಸಚಿವರು :- ಅ) ಇಲ್ಲ ರಾತ್ರಿ ೧೦-೦೦ ಗಂಟೆಯವರೆಗೂ ಅವಕಾಶ ಕೊಡಲಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವದಿಲ್ಲ

ವಿಷಯ : ರಾಜ್ಯದ ರೈತರಿಗೆ ಹೆಚ್ಚಾಗಿರುವ ಸ್ಟ್ಯಾಂಪ ಶುಲ್ಕದ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬೬ (೧೦೬೩)

ಶ್ರೀ ಬಿ. ಎಚ್. ಬನ್ನಿಕೋಡ (ಹಿರೇಕೆರೂರ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರೈತರು ಕೃಷಿ ಅಭಿವೃದ್ಧಿಗಾಗಿ ಬ್ಯಾಂಕ ಹಾಗೂ ಸಹಕಾರಿ ಸಂಸ್ಥೆಗಳ ಮೂಲಕ ಪಡೆಯುವ ಸಾಲಗಳ ಮೇಲೆ ಅತೀ ಹೆಚ್ಚಿನ ಸ್ಟ್ಯಾಂಪ ಶುಲ್ಕ ವನ್ನು ವಸೂಲಿ ಮಾಡುತ್ತಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಕೃಷಿ ಅಭಿವೃದ್ಧಿಗಾಗಿ ರೈತರು ಪಡೆಯುವ ೫೦ ಸಾವಿರ ರೂಪಾಯಿಗಳ ವರೆಗೆ ಸಾಲದ ಮೇಲೆ ಪೂರ್ಣ ಸ್ಟ್ಯಾಂಪ ಶುಲ್ಕವನ್ನು ವಿನಾಯತಿ ಮಾಡಿ ರೈತರ ಆರ್ಥಿಕ ತೊಂದರೆ ನೀಗಿಸಲು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳಲು ಇಚ್ಛಿಸಿದ ಅಥವಾ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :- ಅ) ಹೆಚ್ಚು ಶುಲ್ಕ ಪಡೆಯುತ್ತಿರುವದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಸಣ್ಣ ಹಾಗೂ ಅತಿ ಸಣ್ಣ ರೈತರು ಕೃಷಿ ಅಭಿವೃದ್ಧಿಗಾಗಿ ಸೊಸೈಟಿಗಳ ಮೂಲಕ ಪಡೆಯುವ ಸಾಲದ ಮೊತ್ತದ ಹದಿನೈದು ಸಾವಿರದವರೆಗೆ ಮುದ್ರಾಂಕ ಶುಲ್ಕ ವಿನಾಯತಿ ನೀಡಿದೆ.

ಇ) ಸದ್ಯಕ್ಕೆ ಬೇರೆ ಕ್ರಮದ ಅಗತ್ಯತೆ ಕಂಡು ಬರುವದಿಲ್ಲ